ಸಿಸಿ ನಂ. 196/2022 ಪಿಡಬ್ಲೂ :1

ದಿನಾಂಕಃ 03-02-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಫಿರ್ಯಾದುದಾರ ಸಂಸ್ಥೆಯ ವ್ಯವಸ್ಥಾಪಕರ ಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಹಾಗೂ ಸದರಿ ವ್ಯವಸ್ಥಾಪಕರನ್ನು ಪಿಡಬ್ಲ್ಯೂ-1 ಎಂದು ಪರಗಣಿಸಲಾಗಿದೆ .

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

2. ಆರೋಪಿಯು ನೀಡಿದ ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ . ಸದರಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -4 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -5 ಎಂದು, ಆರೋಪಿಯು ಕೊಟ್ಟಿರುವ ಸಾಲದ ಅರ್ಜಿಯ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಅರ್ಜಿಯ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಅರ್ಜಿಯ ಯಥಾ ನಕಲನ್ನು ನಿಪಿ-6 ಎಂದು ಗುರುತಿಸಲಾಯಿತು . ಸಾಲದ ಕರಾರು ಪತ್ರದ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಕರಾರು ಪತ್ರದ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ -7 ಎಂದು

ಗುರುತಿಸಲಾಯಿತು . ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಡಿಮಾಂಡ್ ಪ್ರಾಮಿಸರಿ ನೋಟಿನ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ -8 ಎಂದು ಗುರುತಿಸಲಾಯಿತು . ರಸೀದಿಯ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ರಸೀದಿಯ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ರಸೀದಿಯ ಯಥಾ ನಕಲನ್ನು ನಿಪಿ-9 ಎಂದು ಗುರುತಿಸಲಾಯಿತು .

( ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.